# ಸಾಪ್ತಾಹಿಕ ಪ್ರಭ

5 ಸೆಪ್ಟೆಂಬರ್ 2010

www.kannadaprabha.com    e-mail:kannadaprabha@gmail.com


# ಆಚಾರ್ಯ ದೇವೋಭವ

**ಕೈ ಹಿಡಿದು ನೀ ನಡೆಸು ಮುಂದೆ**

ಶಿಕ್ಷಕರ ದಿನಾಚರಣೆಯ ಶುಭಾಶಯಗಳು. ಬೆತ್ತ ಹಿಡಿಯದೆ ಬತ್ತದ ಜೀವನೋತ್ಸಾಹವನ್ನು, ವಿವಿಧ ಕ್ಷೇತ್ರಗಳಲ್ಲಿ 'ಮಾಸ್ಟರ್ ಪೀಸ್'ಗಳನ್ನು ತಂದ ಮೇಷ್ಟ್ರುಗಳಿಗೆ ಪುಟ್ಟ ಗುರುವಂದನೆ, ಇಲ್ಲಿದೆ.





## ಹಳ್ಳಿ ಮೇಷ್ಟ್ರು ಗಾಂಧಿವಾದ

● ಚಿತ್ರ ಲೇಖನ:
**ಚಿಕ್ಕಪ್ಪನಹಳ್ಳಿ ಷಣ್ಮುಖ**

(ಅ)

ಜಾಗತೀಕರಣದ ಪ್ರಭಾವದಿಂದಾಗಿ ವಿಶ್ವವೇ ಒಂದು ಪುಟ್ಟ ಹಳ್ಳಿಯಾಗಿ ಗೋಚರಿಸುತ್ತಿರುವ ಈ ವೇಳೆ ಹಳ್ಳಿ ಮೇಷ್ಟ್ರು ಅಂದಾಕ್ಷಣ ಗ್ರಾಮೀಣ ಸೊಬಗು, ಸಂಕಷ್ಟಗಳು ಕಣ್ಣ ಮುಂದೆ ಬಂದು ನಿಲ್ಲುವುದು ತುಸು ತ್ರಾಸದಾಯಕವೇ ಸರಿ. ಹಳ್ಳಿಗಳಲ್ಲಿ ಮೇಷ್ಟ್ರುಗಳಾಗಿದ್ದವರೂ



ಸಂಜೆ ವೇಳೆಗೆ ಬಸ್ಸು ಹತ್ತಿಕೊಂಡು ಪಟ್ಟಣ ಸೇರುತ್ತಾರೆ. ಬಸ್ಸು ಹೋಗುವ ಹಾಗೂ ಬರುವ ವೇಳೆಗಷ್ಟೇ ಪಾಠ ಎಂಬಂತಾಗಿದೆ. ಎಲ್ಲಿ ನೋಡಿದರೂ ಬಿಸಿಯೂಟ, ಅಕ್ಕಿ, ಬೇಳೆ ಅಂತ ಮರಿ ಹಾಕಿದ ಬೆಕ್ಕಿನ ಹಾಗೆ ಚಡಪಡಿಸುತ್ತಿರುವ ಮೇಷ್ಟ್ರುಗಳೇ ಕಣ್ಣಿಗೆ ಬೀಳುತ್ತಾರೆ. ಶಿಕ್ಷಣದ ಗುಣಮಟ್ಟಕ್ಕಿಂತಲೂ ಬಿಸಿಯೂಟದ ಗುಣಮಟ್ಟವೇ ಪ್ರಧಾನವೆಂಬಂತಾಗಿದೆ. ಇಂತಹ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯ ನಾರಾಯಣಪುರ ಬೆಳಗೆರೆ ಗ್ರಾಮದ ಹಳ್ಳಿ ಮೇಷ್ಟ್ರು ಬೆಳಗೆರೆ ಕೃಷ್ಣಶಾಸ್ತ್ರಿ ಜ್ಞಾನ ದಾಸೋಹದ ಜೊತೆಗೆ ಅನ್ನದಾಸೋಹವನ್ನು ವ್ಯವಸ್ಥಿತವಾಗಿ ನಿರ್ವಹಿಸಿ ಗ್ರಾಮೀಣ ಶಿಕ್ಷಣಕ್ಕೆ ಹೊಸ ಷರಾ ಬರೆದಿರುವ ಯಶೋಗಾಥೆ ಶೈಕ್ಷಣಿಕ ವ್ಯವಸ್ಥೆಗೆ ದಿಕ್ಸೂಚಿಯಂತಿದೆ. 95 ರ ಇಳಿವಯಸ್ಸಿನಲ್ಲಿರುವ ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೆ ಇನ್ನೂ ಶಿಕ್ಷಣದ ದಾಹ ಕಡಿಮೆಯಾಗಿಲ್ಲ. ಮರಳಿನ ಮೇಲೆ ಅ. ಆ, ಇ,ಈ ಬರೆದು ಅಕ್ಷರ ಲೋಕ ಪ್ರವೇಶಿಸಿದ ಶಾಸ್ತ್ರಿಗಳು ಕಣ್ಣ ಮುಂದೆ ಎದುರಾದ ಸ್ಲೇಟು, ಬಳಪ, ಪೆನ್ಸಿಲ್, ಕಂಪ್ಯೂಟರ್ ಚಿತ್ರಗಳನ್ನು ಮನಸ್ಸಿನಲ್ಲಿ ಅಚ್ಚೊತ್ತಿಕೊಂಡಿದ್ದಾರೆ. ಮೇಷ್ಟ್ರು ಆಗಿದ್ದುಕೊಂಡೇ ಹುಟ್ಟಿ ಹಾಕಿದ ಶಾರದಾ ಮಂದಿರ ವಿದ್ಯಾಸಂಸ್ಥೆಯಲ್ಲೀಗ 800 ಮಂದಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ನಿನ್ನೆ ಮೊನ್ನೆವರೆಗೂ ಸರ್ಕಾರದ ಅನುದಾನವಿಲ್ಲದೇ ದಾನಿಗಳ ನೆರವು ಪಡೆದು ಸಂಸ್ಥೆ ದಾಪುಗಾಲು ಹಾಕಿತ್ತು. ಈಗ ಪರಿಸ್ಥಿತಿ ತುಸು ಬದಲಾಗಿದೆ. 800 ಮಂದಿ ಅಲ್ಲಿನ ಹಾಸ್ಟೆಲ್‌ನಲ್ಲಿದ್ದು ಊಟ ಮಾಡುತ್ತಾರೆ. ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಮೂರು ತಿಂಗಳಿಗೊಮ್ಮೆ ಅಕ್ಷರ ದಾಸೋಹದ ಹೆಸರಿನಲ್ಲಿ ಒಂದಿಷ್ಟು ದವಸ ಬರುತ್ತಿದೆ. ಉಳಿದಂತೆ ಶಾಸ್ತ್ರಿಗಳ ದೂರದೃಷ್ಟಿತನ ಹಾಗೂ ಕಾಳಜಿಯೇ ದಾಸೋಹಕ್ಕೆ ನೆಲೆಯೊದಗಿಸಿದೆ.

ಶಿಕ್ಷಣ ಸಂಸ್ಥೆ ಕಟ್ಟಿದ ಬಗ್ಗೆ ತಮ್ಮದೇ ಆದ ಬದ್ಧತೆ ಹಾಗೂ ನಿಲುವುಗಳನ್ನು ಶಾಸ್ತ್ರಿಗಳು ಪ್ರಧಾನವಾಗಿ ಪ್ರಸ್ತಾಪಿಸುತ್ತಾರೆ. ತಮ್ಮ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದ ವೀರಯ್ಯ ಹಾಗೂ ಸಣ್ಣ ರುದ್ರಯ್ಯ ಅವರನ್ನು ಆಗಿಂದಾಗ್ಗೆ ನೆನಪು ಮಾಡಿಕೊಳ್ಳುತ್ತಾರೆ. ಇದಲ್ಲದೇ ತಾವು ಶಿಕ್ಷಕರಾಗಿದ್ದಾಗ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸಿದ ಜಿ.ಸಿದ್ದಯ್ಯ ಅವರನ್ನು ನಿತ್ಯವೂ ಒಮ್ಮೆ ನೆನೆಯುತ್ತಾರೆ. 1) ಉಪಾಧ್ಯಾಯ ವೃತ್ತಿ ಸಿಗಬೇಕಾದರೆ ಏಳೇಳು ಜನ್ಮದ ಪುಣ್ಯ ಮಾಡಿರಬೇಕು 2) ಉಪಾಧ್ಯಾಯ ಬೋಧಿಸುವುದೆಂದರೆ ವಿದ್ಯಾರ್ಥಿ ಮೇಲೆ ಬೀರುವ ಆಧ್ಯಾತ್ಮ ಪ್ರಕ್ರಿಯೆ ಎಂಬ ಸಿದ್ದಯ್ಯ ಅವರ ಈ ಎರಡು ವಾಕ್ಯಗಳನ್ನು ಶಾಲೆಯ ಪ್ರವೇಶ ದ್ವಾರದಲ್ಲಿರುವ ಬೋರ್ಡ್‌ಗಳ ಮೇಲೆ ಬರೆಯಿಸಿದ್ದಾರೆ. ಹೊಸದಾಗಿ ಶಾಲೆ ಪ್ರವೇಶಿಸುವವರಿಗೆ ಈ ವಾಕ್ಯಗಳನ್ನು ಓದಿಸಿ ಮನನ ಮಾಡುತ್ತಾರೆ. ಇದಲ್ಲದೇ ಶಾಲೆಯೇ ದೇವಾಲಯ, ಮಕ್ಕಳೇ ದೇವರು, ಅಧ್ಯಾಪಕರೇ ಅರ್ಚಕರು, ಅರಿವೇ ಪ್ರಸಾರ ಎಂಬ ಮತ್ತೋರ್ವ ಶಿಕ್ಷಕ ಅಲ್ಲೀಸಾಬ್‌ರ ಹೇಳಿಕೆಯನ್ನು ಅವರು ನೆನಪಿಸುತ್ತಾರೆ.

ಬೆಂಗಳೂರಿನ ಮಲ್ಲೇಶ್ವರಂ ಶಾಲೆಯಲ್ಲಿ ಎಸ್–ಎಸ್‌ಎಲ್‌ಸಿ ಓದಿದ ನಂತರ ಹಳ್ಳಿಯತ್ತ ಮುಖ ಮಾಡಿದ ಬೆಳಗೆರೆ ಕೃಷ್ಣಶಾಸ್ತ್ರಿಗಳು ಬೆಳಗೆರೆಯಲ್ಲಿ ಶಾಲೆ ಆರಂಭಿಸಿದರು. 1966 ರಲ್ಲಿ ಶಾರದಾ ಮಂದಿರ ವಿದ್ಯಾಸಂಸ್ಥೆ ತೆರೆದರು. ಕಿತ್ತು ತಿನ್ನುವ ಬಡತನದ ದೃಶ್ಯಗಳೇ ಕಂಡು ಬರುವ ಚಳ್ಳಕೆರೆ ತಾಲೂಕಿನ ಬೆಳಗೆರೆ ಶೈಕ್ಷಣಿಕ ವಾತಾವರಣಕ್ಕೆ ಪೂರಕವಾಗಿರಲಿಲ್ಲ. ಊರ ಜನರನ್ನು ಕರೆಯಿಸಿ ಅವರುಗಳನ್ನೇ ಕಾರ್ಯದರ್ಶಿಗಳನ್ನಾಗಿ ಮಾಡಿಕೊಂಡು ಸಂಸ್ಥೆ ಮುನ್ನಡೆಸಿದರು. ಆಶ್ಚರ್ಯವೆಂದರೆ ಶಾಲೆ ಆರಂಭವಾದ ದಿನದಿಂದಲೇ ಇಲ್ಲಿ ಹಾಸ್ಟೆಲ್ ಕೂಡಾ ಕಾರ್ಯಾರಂಭ ಮಾಡಿದೆ. 45 ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿದೆ.

ಈಗಿನಂತೆ ಅಂದು ವಿಷಯವಾರು ಮೇಷ್ಟ್ರುಗಳಿರಲಿಲ್ಲ. ಕನ್ನಡ, ಇಂಗ್ಲಿಷ್, ಗಣಿತ, ಸಮಾಜ ಶಾಸ್ತ್ರ ಎಲ್ಲ ವಿಷಯಗಳಲ್ಲೂ ಶಾಸ್ತ್ರಿಗಳು ಪಾಠ ಮಾಡುತ್ತಿದ್ದರು. ಅವರಿಗಿರುವ ಇಂಗ್ಲೀಷ್ ಹಾಗೂ ಕನ್ನಡ ಭಾಷೆಯ ಮೇಲಿನ ಹಿಡಿತ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಸುತ್ತಮುತ್ತಲಿನ ಊರು ಸುತ್ತಿ ರಾಗಿ, ಅಕ್ಕಿ ದೇಣಿಗೆಯಾಗಿ ಪಡೆಯುತ್ತ, ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಎಂದು ಮನವಿ ಮಾಡಿಕೊಳ್ಳುತ್ತ ಬಂದ ಶಾಸ್ತ್ರಿಗಳು ಬೆತ್ತ ಹಿಡಿಯದೇ ಹುಡುಗರಿಗೆ ಓದು ಬರಹ ಕಲಿಸಿದರು. ●



## (ಆ) ಅಮೂರರ ದಿನಗಳು

ಹಿರಿಯ ವಿಮರ್ಶಕ ಹಾಗೂ ನಿವೃತ್ತ ಪ್ರಾಧ್ಯಾಪಕ ಡಾ.ಜಿ.ಎಸ್. ಅಮೂರರ ಸಂದರ್ಶನ ಮಾಡಿದ್ದಾರೆ ಕ.ಮ.ರವಿಶಂಕರ್

● **ಶಿಕ್ಷಕರಾಗಿ ನೀವು ಮರೆಯಲಾಗದ ಸಂಗತಿ ಏನು?**

ಸುಮಾರು 1949ರಿಂದ 85ರವರೆಗೆ ಬೇರೆ ಬೇರೆ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕನಾಗಿ ಕೆಲಸ ಮಾಡಿದೆ. ಕಾಲೇಜು ಮಟ್ಟದ ಅನುಭವ ಅಂದರೆ ವಿದ್ಯಾರ್ಥಿಗಳೊಂದಿಗಿನ ಒಡನಾಟ. ಒಮ್ಮೆ ಹಾಸ್ಟೆಲ್ ಲೆಕ್ಚರರ್ ಆಗಿದ್ದೆ.

5 ನೇ ಪುಟಕ್ಕೆ



## ನಾವು ಪೇಪರ್ ಹುಡುಗರು

**ಜಾಕಿ, ಬ್ಲ್ಯಾಕಿ, ನೈಂಟಿ, ಕಾಟ್, ಮೀಟರ್, ಅನಾಸಿನ್**

ಚಿತ್ರ, ಲೇಖನ: ಕೆ.ಶಿವು

ನಿನ್ನೆ (ಸೆಪ್ಟೆಂಬರ್ 4) 'ವೆಂಡರ್ಸ್ ಡೇ'. ಪತ್ರಿಕೆಗಳನ್ನು ಹಾಕುವ 'ಪರಾಗ ಸ್ಪರ್ಶ'ದ ಪೇಪರ್ ಮಿತ್ರರಿಗೆ 'ಸಾಪ್ತಾಹಿಕ ಪ್ರಭ'ದ ಶುಭಾಶಯಗಳು. ಪತ್ರಿಕೆಗಳಿಗೆಲ್ಲ ಹೆಸರು ತರುವ ಆ ಹುಡುಗರ ಅಡ್ಡ ಹೆಸರಿನ ಲೋಕದಲ್ಲಿ ಅಡ್ಡಾಡಿದ್ದಾರೆ, ಅವರದ್ದೇ ಅಡ್ಡೆಗಳಲ್ಲಿ ಓಡಾಡುವ ಪತ್ರಿಕಾ ವಿತರಕ ಕೆ.ಶಿವು.

ಪ್ರತಿಯೊಂದು ಕೆಲಸಕ್ಕೂ ನೆನಪಿಟ್ಟುಕೊಳ್ಳುವುದು ಅಥವಾ ಗುರುತಿಟ್ಟುಕೊಳ್ಳುವುದು ಅಂತ ಇದ್ದೇ ಇರುತ್ತದೆ. ಅದೇ ರೀತಿ ನಮ್ಮ ದಿನಪತ್ರಿಕೆ ವಿತರಣೆ ಕೆಲಸದಲ್ಲೂ ಒಂದು ಏರಿಯಾದಲ್ಲಿರುವ ಅನೇಕ ರಸ್ತೆಗಳು, ಆ ರಸ್ತೆಗಳಲ್ಲಿ ನಾವು ಪ್ರತಿದಿನ ದಿನಪತ್ರಿಕೆ ಹಾಕುವ ಮನೆಗಳನ್ನು ನಾವು ಏಜೆಂಟರು ಮತ್ತು ನಮ್ಮ ಬೀಟ್ ಹುಡುಗರು ನೆನಪಿಟ್ಟುಕೊಳ್ಳಬೇಕು. ಇದನ್ನು ನಾವು ಯಾವುದೇ ಕಾರಣಕ್ಕೂ ಮರೆಯುವಂತಿಲ್ಲ.

ಈ ರೀತಿ ನಮ್ಮ ಗ್ರಾಹಕರ ಮನೆಗಳನ್ನು ನಾವು ಗುರುತಿಟ್ಟುಕೊಂಡು ಹೋಗಿ ಪ್ರತಿ ತಿಂಗಳು ಹಣ ವಸೂಲಿ ಮಾಡುವ ರೀತಿ ನೀತಿಗಳು, ನಮ್ಮ ಹುಡುಗರು ಮನೆಗಳನ್ನು ಗುರುತಿಟ್ಟುಕೊಳ್ಳುವ ವಿಧಾನ, ಅದಕ್ಕೆ ಅವರೇ ನಾಮಕರಣ ಮಾಡಿದ ಅಡ್ಡ ಹೆಸರುಗಳೂ, ತಮಾಷೆ ಪದಗಳು, ಆ ಕ್ಷಣಕ್ಕೆ ಬಲು ಮೋಜೆನಿಸಿದರೂ ಅದು ನನಗೂ ಮತ್ತು ನನ್ನ ಬೀಟ್ ಹುಡುಗರಿಗೂ ತುಂಬಾ ಮುಖ್ಯವಾಗಿರುತ್ತದೆ ಮತ್ತು ಸುಲಭವೂ ಆಗಿರುತ್ತದೆ.

ಆತ ತಮಿಳು ಹುಡುಗ ಸೇಬು. (ಅದು ಅಡ್ಡ ಹೆಸರು, ನಿಜ ಹೆಸರು ಶರತ್ ಅಂತ. ಶರತ್ ಅಂತ ಕೂಗಿದಾಗ ತಿರುಗಿನೋಡದೆ ಸೇಬು ಎಂದಾಗ ಚಕ್ಕನೆ ತಿರುಗುವಷ್ಟು ಓವರ್‌ಟೇಕ್ ಮಾಡಿದೆ ಅವನ ಅಡ್ಡ ಹೆಸರು.) ಒಂದು ದಿನ ಯಾವುದೋ ಒಂದು ಮನೆಗೆ ಪತ್ರಿಕೆ ಹಾಕದೆ ತಪ್ಪಿಸಿದ್ದ. ಎಂದಿನಂತೆ ಆ ಗ್ರಾಹಕ ನನಗೆ ಫೋನ್ ಮಾಡಿ ನಮ್ಮ ಮನೆಗೆ ಇವತ್ತಿನ ಪೇಪರ್ ಬಂದಿಲ್ಲವೆಂದು ಹೇಳಿದರು. ಮರುದಿನ ಅವನು ಬಂದಾಗ ನಾನು ಕೇಳಿದೆ.

3 ನೇ ಪುಟಕ್ಕೆ

## ವ್ಯಂಗ್ಯದ ಅಂಗಿಯ ಬದಲಾವಣೆ

# ಹೊಸ ಉಡುಪು

ಹರಿ









ಜಯರಾಮ ಉಡುಪ

ಇವರು ಮಾತಿನಲ್ಲಿ ಹೇಳಬಲ್ಲರು, ರೇಖೆಯಲ್ಲೂ ಗೀಚಬಲ್ಲರು. ನೋಡುವವರಿಗೆ ಇವರ ಚಿತ್ರಗಳು ಬರೀ ಹಾಡಲ್ಲ, ಅದೊಂದು ದೃಶ್ಯಕಾವ್ಯ. ಇವರು ವ್ಯಂಗ್ಯಚಿತ್ರಕಾರ ಜಯರಾಮ ಉಡುಪ. ವ್ಯಂಗ್ಯಚಿತ್ರಗಳೆಂದರೆ ಸಮತಟ್ಟಾದ ಬಿಳಿ ಹಾಳೆಯ ಮೇಲಿರುವ ಕಪ್ಪು ಬಣ್ಣದ ವಕ್ರರೇಖೆಗಳು ಮಾತ್ರ ಎಂಬ ನಂಬಿಕೆಗಳು ಸುಳ್ಳಾಗುವುದು ಜಯರಾಮ ಉಡುಪ ಅವರ ಕೃತಿಗಳನ್ನು ನೋಡಿದಾಗ. ಅಂಗೈಯಲ್ಲಿ ಅರಮನೆ ತೋರಿಸುವ ಹಸ್ತಸಾಮುದ್ರಿಕಾ ರೇಖೆಗಳಲ್ಲ ಅವು. ಅಷ್ಟಕ್ಕೂ ಅದು ಬರೀ ಗೆರೆಗಳ ಲೀಲೆಯೂ ಅಲ್ಲ. ಅದು ಕಣ್ಣಿಗೂ ಹಬ್ಬ. ಮನಸ್ಸಿಗೂ ಹಬ್ಬ. ಕುಂದಾಪುರದ ಬಳ್ಕೂರು ಗ್ರಾಮದವರಾದ ಜಯರಾಮ ಉಡುಪ ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ವೃತ್ತಿಯಲ್ಲಿ ಎಂಜಿನಿಯರ್ ಆಗಿರುವ ಅವರು ಹವ್ಯಾಸಿ ವ್ಯಂಗ್ಯಚಿತ್ರಕಾರರಾಗಿ 'ವ್ಯಕ್ತಿ ವಿಚಾರ' ಅಂಕಣಕ್ಕಾಗಿ ಕೆಲಸ ಶುರುಮಾಡಿದ್ದು 1990ರಲ್ಲಿ. ಕನ್ನಡಪ್ರಭ/ ಇಂಡಿಯನ್ ಎಕ್ಸ್‌ಪ್ರೆಸ್ ಸಮೂಹದ ಪತ್ರಿಕೆಗಳಿಗೆ ಕೆಲಸ ಮಾಡಿದ ಅವರು ಇಲ್ಲಿಯವರೆಗೆ ವಿವಿಧ ಪತ್ರಿಕೆಗಳಿಗಾಗಿ 1000ಕ್ಕೂ ಹೆಚ್ಚು ಕ್ಯಾರಿಕೇಚರ್ ಮತ್ತು ವ್ಯಂಗ್ಯಚಿತ್ರಗಳನ್ನು ರಚಿಸಿದ್ದಾರೆ.

ಗೀಚಿ ಗೀಚಿ ಮರುಳು ಮಾಡುವ ವ್ಯಂಗ್ಯಚಿತ್ರಕಾರರನ್ನು ಒಂದು ಲೆಕ್ಕದಲ್ಲಿ ಚಿತ್ರಸಾಹಿತಿಗಳು ಎನ್ನಬಹುದು. ಒಂದು ವ್ಯಂಗ್ಯಚಿತ್ರವನ್ನು ನೋಡಿದಾಗ ಅಲ್ಲೊಂದು ಚಿತ್ರ ಮತ್ತು ಅದ್ಭುತವಾದ ಸಾಹಿತ್ಯ ಎರಡೂ ಕಾಣಬರುತ್ತವೆ. ಯಾವ ಸಾಂಪ್ರದಾಯಿಕ ಶಿಕ್ಷಣವೂ ಇಲ್ಲದೆ, ವ್ಯಂಗ್ಯಚಿತ್ರ ಕಲೆಯನ್ನು ಬರೆದು ಬರೆದೇ ಕಲಿತ ಉಡುಪ ಈ ಎರಡನ್ನೂ ಮೀರಿದ್ದನ್ನು ಪ್ರಯತ್ನಿಸಿರುವುದು ಅವರ ಕೃತಿಗಳಲ್ಲಿ ಕಂಡುಬರುತ್ತದೆ. ಅವರ ವ್ಯಂಗ್ಯಚಿತ್ರಗಳು ಒಂದು ತಾಜಾ ಆದ ಕಲಾಕೃತಿಯಂತೆ ಕಾಣಬರುವುದು ಇದೇ ಕಾರಣಕ್ಕಾಗಿ. ಕಪ್ಪುಬಿಳಿ ಕಣ್ಣಿನಲಿ ಕಲರ್‌ಫುಲ್ ಕನಸುಗಳನ್ನು ತುಂಬುವ ಉಡುಪ ಅವರ ಪ್ರಯತ್ನ ಕೇವಲ ಬಣ್ಣಕ್ಕೆ ಸೀಮಿತವಾಗಿಲ್ಲ. ಒಂದು ಪೇಂಟಿಂಗ್‌ನಲ್ಲಿರಬಹುದಾದಷ್ಟು ವಿವರಗಳನ್ನೂ ಕೊಡಲು ಪ್ರಯತ್ನಿಸುತ್ತಾರೆ ಅವರು.

ಕಾರ್ಟೂನ್‌ನಲ್ಲಿ ಕಥೆಯಿರುವುದಿಲ್ಲ. ಕಥೆ ಕೇಳಲು ಪುರಸೊತ್ತಿಲ್ಲದವರನ್ನು ಕ್ಷಣಮಾತ್ರದಲ್ಲಿ ನಗಿಸಿ ಸಾಗಹಾಕುವುದು ಕಾರ್ಟೂನ್‌ನ ಉದ್ದೇಶ. ಮಕ್ಕಳಿಗೆ ಕಾರ್ಟೂನ್‌ಗಳು ಇಷ್ಟವಾಗುವುದೂ ಇದೇ ಕಾರಣಕ್ಕೆ. ದೊಡ್ಡ ಕಲಾವಿದರ ಪೇಂಟಿಂಗ್‌ಗಳನ್ನು ನೋಡಿ ಅರ್ಥವಾಗದಿದ್ದರೆ ಅದರಲ್ಲೇನೋ ವಿಶೇಷವಿರಬೇಕು ಎಂದುಕೊಂಡು ಸುಮ್ಮನಾಗುವವರು ಕಾರ್ಟೂನ್ ಅರ್ಥವಾಗದಿದ್ದರೆ ಅದು ಸರಿಯಿಲ್ಲ ಎಂದೇ ಹೇಳಿಬಿಡುತ್ತಾರೆ. ಆ ಲೆಕ್ಕದಲ್ಲಿ ಕಾರ್ಟೂನ್ ಕೆಲಸ ಬಹಳ ಸೂಕ್ಷ್ಮ. ಅಲ್ಲದೆ, ಇಂದಿನ ಚಲನಚಿತ್ರ, ಧಾರಾವಾಹಿಗಳ ಹೊಸ ನಟನಟಿಯರು,

5 ನೇ ಪುಟಕ್ಕೆ


ಒಳಪುಟಗಳಲ್ಲಿ

2 ದಡ ಯಾವುದು? ಪಿ. ಚಿದಂಬರಂ



3 ಕ್ಯಾನ್‌ವಾಸ್ ಹೆಜ್ಜೆಗಳು



4 'ಪ್ರೇಮಾಂತರ'



5 ಸ್ಕೂಲ್ ಮಾಸ್ಟರ್ ಕುಂವೀ



6 ರೀಮಾ ಮೀರಾ ಆದಾಗ

